# ಕರ್ನಾಟಕ ಸರ್ಕಾರ
## (ಕೃಷಿ ಇಲಾಖೆ)

ಸಂಖ್ಯೆ:ರಗೊವಿ/ರಕಾದಾ/ಮು14/2014-15

ಕೇಂದ್ರ ಕಚೇರಿ
ಶೇಷಾದ್ರಿ ರಸ್ತೆ, ಬೆಂಗಳೂರು.
ದಿನಾಂಕ: 25.07.2014

ಗೆ,

**ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ**

ವಿಷಯ: 2014ರ ಮುಂಗಾರು ಹಂಗಾಮಿನಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿಯ ಶಾಖೆಗಳ ಮೂಲಕ ಕಾಪು ದಾಸ್ತಾನಿನಡಿ ರಸಗೊಬ್ಬರವನ್ನು ಸಂಗ್ರಹಿಸುವ ಕುರಿತು.

ಉಲ್ಲೇಖ:1) ಈ ಕಚೇರಿಯ ಪತ್ರದ ಸಂ: ರಗೊವಿ/ಮು-14/ಕಾ.ದಾ/2014-15, ದಿನಾಂಕ: 26.05.2014.

2) ಈ ಕಚೇರಿಯ ಪತ್ರದ ಸಂ: ರಗೊವಿ/ರ.ಕಾ.ದಾ/ಕನಿಷ್ಟ ಪ್ರ./2014-15, ದಿನಾಂಕ: 18.7.2014

3) ಈ ಕಚೇರಿಯ ಪತ್ರ ಸಂ: ರಗೊವಿ/ರ.ಕಾ.ದಾ/ಸಂಗ್ರ .ವಿಲೆ/2014-15 ದಿನಾಂಕ: 25.07.14

~~~~~~~~~~~~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-1 ರ ಪತ್ರದಲ್ಲಿ ಮುಂಗಾರು 2014ರ ಹಂಗಾಮಿಗೆ ಜಿಲ್ಲೆಗಳಲ್ಲಿ ಸಂಗ್ರಹಿಸಬೇಕಾದ ವಿವಿಧ ಗ್ರೇಡ್‌ಗಳ ರಸಗೊಬ್ಬರದ ಪ್ರಮಾಣವನ್ನು ತಿಳಿಸಲಾಗಿತ್ತು. ಪ್ರಸಕ್ತ ಸಂದರ್ಭವನ್ನು ವಿಶ್ಲೇಷಿಸಿ ಹಾಲಿ ಜಿಲ್ಲೆಗಳಲ್ಲಿ ಕಾಪು ದಾಸ್ತನಿನಡಿ ನಿರ್ವಹಿಸಬೇಕಾದ ಪ್ರಮಾಣವನ್ನು ಉಲ್ಲೇಖ-3ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಸಿ.ಎಂ.ಎಫ್ ಸಂಸ್ಥೆಗೆ ಸೂಚಿಸಲಾಗಿದೆ. ಉಲ್ಲೇಖ-2 ರ ಪತ್ರದಲ್ಲಿ ರಾಜ್ಯಕ್ಕೆ ಸರಬರಾಜಾದ ಶೇ.50ರ ಪ್ರಮಾಣದ ಯೂರಿಯಾ ರಸಗೊಬ್ಬರವನ್ನು ಕಡ್ಡಾಯವಾಗಿ ಕೆ.ಎಸ್.ಸಿ.ಎಂ.ಎಫ್ ಸಂಸ್ಥೆಗೆ ನೀಡಲು ಎಲ್ಲಾ ರಸಗೊಬ್ಬರ ತಯಾರಕರಿಗೆ ಸೂಚನೆ ನೀಡಲಾಗಿದೆ.

ಅದೇ ರೀತಿ ಜಿಲ್ಲಾವಾರು ಕಾಪು ದಾಸ್ತಾನಿನಡಿಯಲ್ಲಿರುವ ಹಳೆಯ ದಾಸ್ತಾನನ್ನು ಕಡ್ಡಾಯವಾಗಿ ವಿಲೇವಾರಿ ಮಾಡಿ ಅಷ್ಟೇ ಪ್ರಮಾಣದಲ್ಲಿ ವಿವಿಧ ಗ್ರೇಡ್‌ಗಳ ರೈತರಿಗೆ ಅಗತ್ಯವಿರುವ ರಸಗೊಬ್ಬರಗಳನ್ನು ಖರೀದಿಸಲು ಕೆ.ಎಸ್.ಸಿ.ಎಂ.ಎಫ್ ಸಂಸ್ಥೆಗೆ ಹಾಗು ರಸಗೊಬ್ಬರ ತಯಾರಕರಿಗೆ ಈಗಾಗಲೇ ಸೂಚನೆ ನೀಡಲಾಗಿದೆ.

ರಾಜ್ಯದಲ್ಲಿ ಉತ್ತಮ ಮಳೆಯಾಗುತ್ತಿದೆ ರಸಗೊಬ್ಬರಗಳಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ನಿಮ್ಮ ಜಿಲ್ಲೆಯ ಕೆ.ಎಸ್.ಸಿ.ಎಂ.ಎಫ್ ಅಧಿಕಾರಿಗಳು ಹಾಗು ರಸಗೊಬ್ಬರ ತಯಾರಕರೊಡನೆ ಸಮಾಲೋಚನೆ ನಡೆಸಿ ಅವಶ್ಯವಿರುವ ರಸಗೊಬ್ಬರಗಳನ್ನು ರೈತರಿಗೆ ಪೂರೈಸಲು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ. ಒಟ್ಟಾರೆಯಾಗಿ ರಾಜ್ಯದಲ್ಲಿ ರೈತರಿಗೆ ಯೂರಿಯಾ ರಸಗೊಬ್ಬರಗಳನ್ನೊಳಗೊಂಡಂತೆ ಯಾವುದೇ ರಸಗೊಬ್ಬರಕ್ಕೆ ಕೊರತೆಯಾಗದಂತೆ ಹಾಗೂ ರಾಜ್ಯದ ಯಾವುದೇ ಭಾಗದಲ್ಲಿಯೂ ಅಹಿತಕರ ಘಟನೆ ಉಂಟಾಗಲು ಅವಕಾಶ ನೀಡದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಸೂಚಿಸಿದೆ.

(ಸಹಿ)
ಕೃಷಿ ನಿರ್ದೇಶಕರ ಪರವಾಗಿ

ಪ್ರತಿಯನ್ನು

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ, ನಂ.8, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು-52 ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
2. ಪ್ರತಿಯನ್ನು ರಾಜ್ಯದ ಎಲ್ಲಾ ರಸಗೊಬ್ಬರ ತಯಾರಕರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
~~~~~~~~~~~~